# ಬನ್ನಿ, ಬೇಲೂರು ಮಠಕ್ಕೆ

ಸ್ವಾಮಿ ಆಶುತೋಷಾನಂದ

*(ಹಿಂದಿನ ಸಂಚಿಕೆಯಿಂದ)*

**ಸ್ವಾ**ಮಿ ವಿವೇಕಾನಂದರ ಮಂದಿರದ ನಿರ್ಮಾಣ ಕಾರ್ಯ ಹೆಚ್ಚೇನೂ ಮುಂದುವರಿಯದುದನ್ನು ಕಂಡ ಸ್ವಾಮಿ ಬ್ರಹ್ಮಾನಂದರು, ೧೯೧೨ರ ಜನವರಿ ತಿಂಗಳಿನ, 'ಮರಾಠಾ' ಪತ್ರಿಕೆಯಲ್ಲಿ, ನಿಂದನೆಯ ಹಾಗೂ ನೊಂದುಕೊಂಡ ಭಾವದಲ್ಲಿ ಹೀಗೆ ಬರೆದರು: "ಸ್ವಾಮೀಜಿ ೧೦ ವರ್ಷಗಳ ಹಿಂದೆ ತಮ್ಮ ದೇಹವನ್ನು ತ್ಯಜಿಸಿದರು. ಅವರ ಮರಣವು ಇಡೀ ದೇಶಕ್ಕೆ ತುಂಬಲಾಗದ ನಷ್ಟವೆಂದು ಪ್ರತ್ಯೇಕವಾಗಿ ಹೇಳುವ ಆವಶ್ಯಕತೆ ಇಲ್ಲ. ಇದರ ಬಗ್ಗೆ ಜನರು ದುಃಖವನ್ನು ಮತ್ತು ಕಳಕಳಿಯನ್ನು ವ್ಯಕ್ತಪಡಿಸಿಯೇ ಇದ್ದಾರೆ. ಆದರೆ, ಆಧುನಿಕ ಭಾರತದ ದೇಶಭಕ್ತ ಸಂತನಿಗೆ ತಕ್ಕುದಾದ ಒಂದು ಸ್ಮಾರಕವನ್ನು ನಿರ್ಮಿಸಲು ನಮ್ಮಿಂದ ಸಾಧ್ಯವಾಗುವುದಿಲ್ಲವೇ? ಇದು ನಿಜಕ್ಕೂ ನಾಚಿಕೆಯ ವಿಷಯ ಹಾಗೂ ಭಾರತೀಯರ ಹೊಣೆಗೇಡಿತನದ ಸ್ಥಾಯಿ ನಿದರ್ಶನ." ಆದರೆ ಅವರ ಈ ಮೂದಲಿಕೆಯೂ ಕಿವುಡು ಕಿವಿಗಳ ಮೇಲೆ ಬಿದ್ದಂತೆಯೇ ಆಯಿತು.



ಸ್ವಾಮೀಜಿಯವರ ಉಬ್ಬುಚಿತ್ರ

ಮಂದಿರದ ಒಳಗೆ ಇರುವ ಸ್ವಾಮೀಜಿಯವರ ಉಬ್ಬುಚಿತ್ರವನ್ನು ಇರಿಸಲು ಸಾಧ್ಯವಾಗಿದ್ದು ಸ್ವಾಮೀಜಿಯ ಶಿಷ್ಯೆಯಾದ ಸೋದರಿ ನಿವೇದಿತೆಯ ಪ್ರಯತ್ನದಿಂದ; ಸ್ವಾಮೀಜಿಯ ಸಹವರ್ತಿಯಾಗಿದ್ದ ಶ್ರೀಮತಿ ಲೆಗೆಟ್ ಎಂಬುವವಳ ಧನಸಹಾಯದಿಂದ. ಮೊದಲು, ಈಗಿರುವುದಕ್ಕಿಂತಲೂ ಸಣ್ಣದಾದ ಬಿಂಬವನ್ನು ಸ್ಥಾಪಿಸಲು ನಿಶ್ಚಯವಾಗಿತ್ತು. ಹೆಚ್ಚುತ್ತಿರುವ ಖರ್ಚಿನ ದೃಷ್ಟಿಯಿಂದ, ಅದಕ್ಕಿಂತ ದೊಡ್ಡ ಪ್ರತಿಕೃತಿಯನ್ನು ಕಲ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿರಲಿಲ್ಲ. ಆದರೆ, ದಾನಿಯಾದ ಶ್ರೀಮತಿ ಲೆಗೆಟ್, ಇದಕ್ಕಿಂತ ದೊಡ್ಡ ಮೂರ್ತಿ ಇರಬೇಕೆಂದು ಸಲಹೆಯಿತ್ತಾಗ, ನಿವೇದಿತೆಯ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವರು ಹೀಗೆ ಬರೆಯುತ್ತಾಳೆ: "ಆ ಆಕಾರವು ಬೃಹತ್ತಾದುದು! ಅದು ವಿವೇಕಾನಂದರ ಮಂದಿರವನ್ನು ಎಲ್ಲಕ್ಕಿಂತ ಭವ್ಯವಾಗಿ ಕಾಣುವಂತೆ ಮಾಡುತ್ತದೆ. ಭವಿಷ್ಯದ ಕಾಲದಲ್ಲಿ ಅಪೂರ್ವ ರಚನೆಯಾಗಿ ಪರಿಣಮಿಸುತ್ತದೆ."

ಸ್ವಾಮಿ ವಿವೇಕಾನಂದರ ಅಮೃತಶಿಲೆಯ ಉಬ್ಬುಚಿತ್ರವನ್ನು ಕಡೆದದ್ದು ಜೈಪುರದಲ್ಲಿ. ಭಗಿನಿ ನಿವೇದಿತಾ ಹೀಗೆ ಬರೆಯುತ್ತಾಳೆ: "ಶಿಲ್ಪಿಯು ಅಮೃತಶಿಲೆಗೆ ಪೂಜೆ ಸಲ್ಲಿಸಿ, ನೈವೇದ್ಯ ಸಮರ್ಪಿಸಿ ಕೆಲಸವನ್ನು ಆರಂಭಿಸಿದ್ದಾನೆ. ಅನಂತರ ಅವನು ಆ ಶಿಲೆಯಲ್ಲಿ ಅಂತರ್ಗತರಾಗಿರುವ ಸ್ವಾಮೀಜಿಯನ್ನು ಕುರಿತು ಉತ್ಕಟವಾಗಿ ಹೀಗೆ ಪ್ರಾರ್ಥನೆ ಸಲ್ಲಿಸಿದನು, 'ಸ್ವಾಮೀಜಿ! ದಯವಿಟ್ಟು ನನ್ನ ಕೈಗಳಲ್ಲಿ ನೀವು ಪ್ರಕಟಗೊಳ್ಳಬೇಕು' ಎಂದು. ಅವನು ಬೆಳಗ್ಗೆ ೮.೦೦ ಗಂಟೆಯಿಂದ ಸಂಜೆ ೭.೩೦ರವರೆಗೆ ಸತತವಾಗಿ ಕೆಲಸ ಮಾಡುತ್ತಿದ್ದನು. ಮಧ್ಯಾಹ್ನದ ಊಟಕ್ಕೆ ಮಾತ್ರ ಅಲ್ಪ ವಿರಾಮವನ್ನು ತೆಗೆದುಕೊಳ್ಳುತ್ತಿದ್ದನು. ನಮಗೆ ಸಮಾಧಾನವಾಗುವಂತೆ ಪ್ರತಿಕೃತಿಯು ಮೂಡಿಬರದಿದ್ದರೆ, ಈ ಕೆಲಸಕ್ಕೆ ತಾನು ಒಂದು ರೂಪಾಯಿಯನ್ನೂ ತೆಗೆದುಕೊಳ್ಳುವುದಿಲ್ಲವೆಂದೂ, ತೆಗೆದುಕೊಂಡ ದುಡ್ಡನ್ನೆಲ್ಲ ತಿರುಗಿಸುವನೆಂದೂ ಅವನು ಹೇಳಿಕಳಿಸಿದನು."

೧೯೧೩ರಲ್ಲಿ ಈ ಅಮೃತಶಿಲೆಯ ಪ್ರತಿಕೃತಿಯನ್ನು ಸರಳವಾದ ರೀತಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಸ್ವಾಮಿ ವಿವೇಕಾನಂದರ ಪೂಜೆ ಅಲ್ಲಿ ಆರಂಭಗೊಂಡಿತು. ಕಟ್ಟಡ ನಿರ್ಮಾಣ ಕಾರ್ಯ ತಡವಾಗುತ್ತಲೇ ಬಂತು. ೧೯೨೩ರ ಕಡೆಯ ಭಾಗದಲ್ಲಿ ಮಾತ್ರವೇ ಅದನ್ನು ಸಂಪೂರ್ಣಗೊಳಿಸಲು ಸಾಧ್ಯವಾಯಿತು.

ಸ್ವಾಮಿ ವಿವೇಕಾನಂದರ ಬಗ್ಗೆ ವಿಶೇಷವಾಗಿ ಅಧ್ಯಯನವನ್ನು ಮಾಡಿರುವ ಶ್ರೀ ಶಂಕರಿಪ್ರಸಾದ್ ಬಸು ಅವರು ಹೀಗೆ ಬರೆಯುತ್ತಾರೆ: "(ಸ್ವಾಮೀಜಿ ಮಹಾಸಮಾಧಿ ಹೊಂದಿದ ನಂತರದ) ಹದಿನಾರು ವರ್ಷಗಳ ದೀರ್ಘಕಾಲ ಸ್ವಾಮಿ ವಿವೇಕಾನಂದರ ನೆನಪಿಗಾಗಿ ಅನೇಕ ಸಭೆಗಳು ಜರುಗಿದವು. ಸಾವಿರಾರು ಜನರು ಅವರಿಗೆ 'ಜಯಧ್ವನಿ'ಯನ್ನು ಮಾಡಿದರು. ಬೇಲೂರುಮಠಕ್ಕೆ ಸಾವಿರಾರು ಜನ ಭೇಟಿಕೊಟ್ಟು, ಅಸಂಪೂರ್ಣವಾಗಿದ್ದ ಅವರ ಮಂದಿರದಲ್ಲಿ ತಮ್ಮ ಭಕ್ತಿಪೂರ್ವಕ ವಂದನೆಗಳನ್ನು ಸಲ್ಲಿಸಿದರು. ಈ ಜನರ ಭಕ್ತಿಯನ್ನು ನಾವು ಸಂದೇಹಿಸುವಂತಿಲ್ಲ. ಆದರೂ, ಈ ಭಕ್ತಿಯು ಜಾಡ್ಯದಿಂದ ಕೂಡಿತ್ತು ಎನ್ನುವುದನ್ನು ನಾವು ಮರೆಯಬಾರದು. ಇದರಿಂದಾಗಿಯೇ ನಾವು ಮೌಲ್ಯಯುತವಾದ ಯಾವುದನ್ನೂ ಸಾಧಿಸಲು ಅಶಕ್ಯರಾಗುತ್ತೇವೆ."

ಸ್ವಾಮಿ ವಿಜ್ಞಾನಾನಂದರು ಮಂದಿರದ ನಿರ್ಮಾಣಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಈ ಕಾರ್ಯವು ಪ್ರಾರಂಭವಾಗುವುದಕ್ಕೆ ಮುಂಚೆ, ಅವರು ಸ್ವಾಮೀಜಿಯ ಚಿಂತನೆಯಲ್ಲಿಯೇ ಮುಳುಗಿ ಹೋಗಿರುತ್ತಿದ್ದುದನ್ನು ಕಾಣಬಹುದಿತ್ತು. ಅವರು ಸ್ವಾಮೀಜಿಯ ವಿಷಯವಾಗಿಯೇ ನಿರಂತರವಾಗಿ ಮಾತನಾಡುತ್ತಿದ್ದರು ಮತ್ತು ಅವರ ಬಗ್ಗೆಯೇ ಧ್ಯಾನಿಸುತ್ತಿದ್ದರು. ಅವರು ಆಗ ಅಲಹಾಬಾದಿನ ರಾಮಕೃಷ್ಣ ಮಠದಲ್ಲಿ ವಾಸಿಸುತ್ತಿದ್ದರು. ಕೆಲವೊಮ್ಮೆ ಅವರು

ಹತ್ತಿರದಲ್ಲಿದ್ದ ಭರದ್ವಾಜ ಆಶ್ರಮಕ್ಕೆ ಹೋಗಿ ಬರುತ್ತಿದ್ದರು. ಅಲ್ಲಿ ಸಪ್ತರ್ಷಿಗಳ ಮೂರ್ತಿಗಳಿದ್ದವು. ಅವುಗಳನ್ನು ಅವರು ಗಮನವಿಟ್ಟು ನೋಡುತ್ತಿದ್ದರು. ಏಕೆಂದರೆ, ತಮ್ಮ ಒಂದು ದರ್ಶನದಲ್ಲಿ, ಶ್ರೀರಾಮಕೃಷ್ಣರು ಸ್ವಾಮೀಜಿಯನ್ನು ಸಪ್ತರ್ಷಿಗಳಲ್ಲಿ ಒಬ್ಬರೆಂದು ಗುರುತಿಸಿದ್ದರು. ವಿಜ್ಞಾನಾನಂದಜಿ ಅವರು ಸಪ್ತರ್ಷಿ ಮಂಡಲದ ಒಂದು ತೈಲಚಿತ್ರವನ್ನು ಮಾಡಿಸಿ, ತಮ್ಮ ಕೊಠಡಿಯಲ್ಲಿ ಪ್ರದರ್ಶಿಸಿದ್ದರು. ಅವರು ಮತ್ತೆ ಮತ್ತೆ ಹೇಳುತ್ತಿದ್ದರು, "ಸ್ವಾಮೀಜಿ ವಿಶ್ವವ್ಯಾಪಕರಾಗಿದ್ದಾರೆ. ಆದರೆ ಸಪ್ತರ್ಷಿಮಂಡಲವೇ ಅವರ ನಿಜಧಾಮವಾಗಿದೆ."

ಸ್ವಾಮಿ ವಿವೇಕಾನಂದರ ಮಂದಿರ ಮತ್ತು ಓಂಕಾರ ಪ್ರತೀಕವಿರುವ ಮಂದಿರಗಳು ಜನವರಿ ೧೯೨೪ರಲ್ಲಿ ಉದ್ಘಾಟನೆಗೊಂಡವು. ಆದರೆ, ಓಂಕಾರದ ಮಂದಿರಕ್ಕೆ ಹೋಗುವ ಮೆಟ್ಟಲುಗಳ ಬಗ್ಗೆ ಬಹಳಷ್ಟು ಜನ ಸಮಾಧಾನ ಹೊಂದಿರಲಿಲ್ಲ. ತನ್ನ ಸುಸಂಸ್ಕೃತ ಅಭಿರುಚಿಗೆ ಹೆಸರಾಗಿದ್ದ ಮಿಸ್.ಮ್ಯಾಕ್ಲೌಡ್, "ಮೆಟ್ಟಲುಗಳು ತುಂಬ ಸಣ್ಣವಾದುವು, ಇಕ್ಕಟ್ಟಾದವು, ಎತ್ತರವಾದುವು. ಹೀಗಾಗಿ ಸ್ವಾಮೀಜಿ ಮತ್ತು ಅವರ ಚಿಂತನೆಗೆ ತಕ್ಕದಾದುವಲ್ಲ" ಎಂದು ಒಂದು ಕಡೆ ಬರೆಯುತ್ತಾಳೆ. ಹೀಗೆ ಟೀಕಿಸಿ ಆಕೆ ಸುಮ್ಮನಾಗಲಿಲ್ಲ. ಮೆಟ್ಟಲುಗಳನ್ನು ಇನ್ನೂ ಉತ್ತಮಪಡಿಸಲು ಪ್ರಯತ್ನಿಸಿದಳು. ಅದಕ್ಕಾಗಿ ಇಟಲಿಯಿಂದ ವಿನ್ಯಾಸವನ್ನು ತರಿಸಿಕೊಂಡಳು. ಆ ವಿನ್ಯಾಸದ ಮೆಟ್ಟಲುಗಳು ತಮ್ಮ ಅಗಲಕ್ಕೂ ಸುಂದರ ತಿರುವುಗಳಿಗೂ ಪ್ರಸಿದ್ಧವಾಗಿದ್ದವು. ಈ ವಿನ್ಯಾಸದ ಪ್ರಕಾರ, ಮೆಟ್ಟಲುಗಳನ್ನು ಮಾರ್ಪಡಿಸಲಾಯಿತು.

ಸ್ವಾಮೀಜಿಯನ್ನು 'ಶಿವ'ನೆಂದೂ ತಮ್ಮನ್ನು 'ಶಕ್ತಿ'ಯೆಂದೂ ಶ್ರೀರಾಮಕೃಷ್ಣರು ಒಮ್ಮೆ ಹೇಳಿಕೊಂಡಿದ್ದರು. ಸ್ವಾಮೀಜಿಯವರ ಕೆಲವು ಸಹೋದರ ಸಂನ್ಯಾಸಿಗಳು ಸ್ವಾಮೀಜಿಯನ್ನು ಭಗವಾನ್ ಶಿವನ ರೂಪದಲ್ಲಿ ದರ್ಶನವನ್ನು ಪಡೆದಿದ್ದರು. ಸ್ವಾಮೀಜಿಯವರ ಕೊಠಡಿಯಲ್ಲಿ, ಮಿಸ್.ಮ್ಯಾಕ್ಲೌಡ್ ವಿನ್ಯಾಸ ಮಾಡಿದ, ಓವಲ್ ಆಕಾರದ ಸ್ಫಟಿಕಾಕೃತಿಯ ಬಗ್ಗೆ ನಾವು ಈಗಾಗಲೇ ನೋಡಿದ್ದೇವೆ. ಅದರಲ್ಲಿ ಸ್ವಾಮೀಜಿಯವರನ್ನು ಶಿವನೆಂದೇ ಬಿಂಬಿಸಿದೆ. ಹಾಗೆಂದೇ ಸಾಂಕೇತಿಕವಾಗಿ, ಅವರ ದೇಗುಲದ ಮೇಲ್ಭಾಗವನ್ನು ಒಂಬತ್ತು ಅಡಿ ಎತ್ತರದ ತ್ರಿಶೂಲದಿಂದ ಅಲಂಕರಿಸಲಾಗಿದೆ. ೧೯೩೯ರಲ್ಲಿ ಮಿಸ್.ಮ್ಯಾಕ್ಲೌಡ್, ಇದಕ್ಕೆ ಚಿನ್ನದ ಲೇಪನವನ್ನು ಮಾಡಿಸಿದಳು.

## ಬಿಲ್ವ ವೃಕ್ಷ

ಓಂಕಾರಾಕೃತಿಯ ಮಂದಿರಕ್ಕೆ ತೆರಳುವ ಮೆಟ್ಟಲುಗಳ ಬಲಭಾಗದಲ್ಲಿ ಒಂದು ಬಿಲ್ವವೃಕ್ಷವಿದೆ. ಇದರ ಸ್ಥಾನದಲ್ಲಿಯೇ ಇದ್ದ ಹಳೆಯದಾದ ಬಿಲ್ವವೃಕ್ಷದ ಕೆಳಗೆ ಸ್ವಾಮಿ ವಿವೇಕಾನಂದರು ಕುಳಿತುಕೊಳ್ಳುತ್ತಿದ್ದರು.

## ಪರಮಾಧ್ಯಕ್ಷ ಸ್ವಾಮೀಜಿಯವರ ನಿವಾಸಗೃಹ

ಬಿಲ್ವ ವೃಕ್ಷದಿಂದ ಕೆಲವೇ ಅಡಿಗಳ ದೂರದಲ್ಲಿ, ನೈಋತ್ಯ ದಿಕ್ಕಿನಲ್ಲಿ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪರಮಪೂಜನೀಯ ಅಧ್ಯಕ್ಷ ಸ್ವಾಮೀಜಿಯವರ ನಿವಾಸಗೃಹವಿದೆ. ಅವರು ಬೇಲೂರು ಮಠದಲ್ಲಿ ಇದ್ದಾಗಲೆಲ್ಲ, ನಿಗದಿತ ವೇಳೆಗಳಲ್ಲಿ, ದಿನಕ್ಕೆ ಎರಡು ಸಲ ಭಕ್ತಜನರು ಅವರ ದರ್ಶನವನ್ನು ಪಡೆದುಕೊಳ್ಳಬಹುದು.

ಈ ಕಟ್ಟಡದ ನೆಲ ಅಂತಸ್ತನ್ನು, ಬಂಗಾಳದ ನಾಟಕ ಕಂಪನಿಗಳು, ಗಿರೀಶ್‌ಚಂದ್ರ ಘೋಷ್ ಅವರ ಸ್ಮರಣಾರ್ಥ ನೀಡಿದ ದೇಣಿಗೆಗಳಿಂದ ನಿರ್ಮಾಣ ಮಾಡಲಾಯಿತು. ಗಿರೀಶ್‌ಚಂದ್ರ ಘೋಷ್, ಶ್ರೀರಾಮಕೃಷ್ಣರ ಒಬ್ಬರು ಗೃಹಸ್ಥ ಶಿಷ್ಯರಷ್ಟೇ ಅಲ್ಲ, ಆಧುನಿಕ ಬಂಗಾಳಿ ನಾಟಕರಂಗದ ಪಿತಾಮಹರೂ ಕೂಡ. ಆದ್ದರಿಂದಲೇ, ಈ ವಸತಿ ನಿವಾಸಕ್ಕೆ **'ಗಿರೀಶ್ ಸ್ಮೃತಿ ಭವನ'** ಎಂದು ಹೆಸರು ಕೊಟ್ಟಿದೆ. ಮೊದಲು ಇದಕ್ಕೆ ನೆಲ ಅಂತಸ್ತು ಮಾತ್ರವೇ ಇತ್ತು. ತದನಂತರ, ಮೇಲಿನ ಅಂತಸ್ತನ್ನು ಸೇರಿಸಲಾಯಿತು. ಈಗ ನಾವು ಪೂರ್ವದಿಕ್ಕಿನತ್ತ, ಸಮಾಧಿ ಘಾಟಿಗೆ ಹೋಗೋಣ.




## ಸಮಾಧಿ ಘಾಟ್

ಬೇಲೂರು ಮಠದ ಒಳಗಡೆಯ ತೀರ್ಥಯಾತ್ರೆಯು ಕೊನೆಗೊಳ್ಳುವುದು ಸಮಾಧಿ ಘಾಟಿನಲ್ಲಿ. ಅದು ದಹನಸ್ಥಾನ. ಶ್ರೀರಾಮಕೃಷ್ಣರ ಏಳು ಸಾಕ್ಷಾತ್ ಶಿಷ್ಯರನ್ನು ಇಲ್ಲಿಯೇ ಅಗ್ನಿಗೆ ಆಹುತಿಯಾಗಿ ನೀಡಲಾಯಿತು. ಈ ಸ್ಥಳದಲ್ಲಿರುವ ಒಂದು ಶಿಲಾಸ್ಮಾರಕದಲ್ಲಿ, ಅವರೆಲ್ಲರ ಹೆಸರುಗಳನ್ನು ಕೆತ್ತಲಾಗಿದೆ. ಈ ಸ್ಮಾರಕದ ಪಕ್ಕದಲ್ಲಿಯೇ, ಗಂಗೆಯ ಕಡೆಗೆ, ಕಬ್ಬಿಣದ ಕಟಕಟೆಗಳಿಂದ ರಕ್ಷಿಸಲ್ಪಟ್ಟ ಎರಡು ದಹನಸ್ಥಾನಗಳಿವೆ. ಅದರಲ್ಲಿ ಉತ್ತರದ ದಿಕ್ಕಿನಲ್ಲಿ ಇರುವುದು, ರಾಮಕೃಷ್ಣ ಮಹಾಸಂಘದ ಅಧ್ಯಕ್ಷ ಸ್ವಾಮೀಜಿಯವರಿಗೆ ಮೀಸಲಾಗಿದೆ. ಇನ್ನೊಂದು ಸ್ಥಾನವು ಮಹಾಸಂಘದ ಇತರ ಸಂನ್ಯಾಸಿಗಳಿಗೆ ಮೀಸಲಾಗಿದೆ.

ಇಲ್ಲಿ ಸಾಧುಗಳ ಶರೀರವು ಭಸ್ಮವಾಗಿ ಪರಿಣಮಿಸುವುದು. ದೇಹವು ಯಾವುದರಿಂದ ಮಾಡಲ್ಪಟ್ಟಿತ್ತೋ, ಆ ಮೂಲ ಆಕರಗಳಿಗೇ ಅದು ಹಿಂತಿರುಗುವುದು. ಒಂದು ಪ್ರಾಚೀನ ಹಿಂದೂ ಪ್ರಾರ್ಥನೆಯು ಹೀಗೆ ಹೇಳುತ್ತದೆ: "ಓ ಮನಸ್ಸೇ, ಹಿಂದೆ ನೀನು ಮಾಡಿದ ಕ್ರಿಯೆಗಳನ್ನು ನೆನೆಸಿಕೋ. ಅವುಗಳ ಬಗ್ಗೆ ಯೋಚಿಸು." ಈ ಸ್ಥಳದಲ್ಲಿ ದಹನಗೊಂಡ ಮಹಾನ್ ಚೇತನಗಳ ಗೌರವಾರ್ಥ, ಅವರನ್ನು ನೆನೆಸಿಕೊಳ್ಳುತ್ತ ನಾವಲ್ಲಿ ಸ್ವಲ್ಪಕಾಲ ನಿಂತುಕೊಂಡು, ಅವರ ಆಶೀರ್ವಾದಗಳಿಗಾಗಿ ಪ್ರಾರ್ಥಿಸುತ್ತೇವೆ. *(ಮುಂದುವರಿಯುವುದು)*

# ನಿಮ್ಮ ಮೂರು ಶರೀರಗಳನ್ನೂ ಪವಿತ್ರಗೊಳಿಸಿಕೊಳ್ಳಿ


**ಶಾ**ಲೆಯ ಬಸ್ಸು ಜಯನಗರ ಸ್ಟಾಪ್‌ನಲ್ಲಿ ನಿಂತಿತು. ಅಲ್ಲಿ ಒಬ್ಬ ವಯಸ್ಸಾದ ವ್ಯಕ್ತಿ ಒಂದು ಸ್ಕೂಲ್‌ಬ್ಯಾಗ್ ಹೊತ್ತುಕೊಂಡು ಹತ್ತಿದರು. "ಗುಡ್‌ಮಾರ್ನಿಂಗ್, ಇಂದು ನಾನೂ ಕೂಡ ನಿಮ್ಮ ಜೊತೆ ಶಾಲೆಗೆ ಬರುತ್ತಿದ್ದೇನೆ" ಎಂದು ಅವರು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಹೇಳಿದರು. ಬಾಲಕರಿಗೆ ಆಶ್ಚರ್ಯವಾಯಿತು. ಅವರು ನಗಲು ಆರಂಭಿಸಿದರು. ದೊಡ್ಡ ನಗೆಯೊಂದು ಬೀರುತ್ತ, ಸಂದೀಪ ಹೇಳಿದ: "ಇವರು ನಮ್ಮ ತಾತ; ಕುಲಕರ್ಣಿ ಮಾಸ್ತರರ ಕ್ಲಾಸಿಗೆ ಬರುತ್ತಿದ್ದಾರೆ." ಏಳನೆಯ ತರಗತಿಯ ವಿದ್ಯಾರ್ಥಿಗಳೆಲ್ಲರೂ ಒಡನೆ ಚಪ್ಪಾಳೆ ಹೊಡೆದು, ಅವರನ್ನು ಸ್ವಾಗತಿಸಿದರು. ಅವರ ಹೆಸರು, ಪಂಡಿತ ನಾರಾಯಣಶಾಸ್ತ್ರೀ ಎಂದು.

ಪಂಡಿತರು ಬಸ್ಸಿನ ಹಿಂಭಾಗದಲ್ಲಿ ಕುಳಿತುಕೊಂಡರು. ಹುಡುಗರೆಲ್ಲರೂ ಅವರನ್ನು ಮುತ್ತಿದರು. "ತಾತ, ನೀವು ಶಾಲೆಗೆ ದಿನವೂ ಬರುತ್ತೀರಾ?", "ಹುಷಾರಾಗಿರಿ, ನೀವು ಕ್ಲಾಸಿನಲ್ಲಿ ನಿಶ್ಶಬ್ದವಾಗಿ ಕುಳಿತುಕೊಳ್ಳದಿದ್ದರೆ, ಮಾಸ್ತರರು ನಿಮ್ಮನ್ನು ಬಯ್ಯುತ್ತಾರೆ." – ಹೀಗೆಲ್ಲ ವಿದ್ಯಾರ್ಥಿಗಳು ಅವರಿಗೆ ಹೇಳತೊಡಗಿದರು. ಪಂಡಿತರು ಅದಕ್ಕೆಲ್ಲ ನಗುತ್ತಲೇ, ತಮ್ಮ ತಲೆಯಾಡಿಸುತ್ತಿದ್ದರು. ಆದರೆ ಕೆಲವು ಹುಡುಗರು ತಮ್ಮತಮ್ಮಲ್ಲೇ ಕೆಟ್ಟ ಕೆಟ್ಟ ಮಾತುಗಳನ್ನು ಆಡಿಕೊಳ್ಳುತ್ತಿದ್ದರು; ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದರು. ಪಂಡಿತರು ಏನನ್ನೂ ಹೇಳಲಿಲ್ಲ. ಆ ಹುಡುಗರನ್ನು ಗಮನಿಸಿದರು, ಅಷ್ಟೇ.

ಸಂದೀಪನು ತನ್ನ ತಾತನನ್ನು ಯೋಗೀಶ್ ಕುಲಕರ್ಣಿಯವರ ಆಫೀಸಿಗೆ ಕರೆದುಕೊಂಡು ಹೋದನು. ಅವರಿಗೆ ಇಡೀ ಶಾಲೆಯನ್ನು ತೋರಿಸಿಯಾದ ಮೇಲೆ, ಕುಲಕರ್ಣಿಗಳು ಅವರನ್ನು ಏಳನೆಯ ತರಗತಿಯ 'ನೈತಿಕ ಶಿಕ್ಷಣ' ತರಗತಿಗೆ ಕರೆದುಕೊಂಡು ಹೋದರು.

ವಿದ್ಯಾರ್ಥಿಗಳಿಗೆಲ್ಲ ಕಾತರ. ಅವರೆಲ್ಲ ನಾರಾಯಣಶಾಸ್ತ್ರಿಗಳಿಗೆ ಸುಸ್ವಾಗತವನ್ನು ಕೋರಿದರು. ಅವರು ಶುಭ್ರವಾದ ಧೋತಿಯನ್ನು ಧರಿಸಿದ್ದರು. ಅದರ ಮೇಲೆ ಉದ್ದನೆಯ ಬಿಳಿಯ ಜುಬ್ಬಾವನ್ನು ಧರಿಸಿದ್ದರು. ಕ್ರೀಮ್ ಬಣ್ಣದ ಶಲ್ಯವನ್ನು ಹೆಗಲ ಮೇಲೆ ಹೊದ್ದಿದ್ದರು. ಅವರದು ಗಂಭೀರವಾದ ನಿಲುವು; ತಿಳಿನಗೆಯ ಮುಖಭಾವ; ಆತ್ಮವಿಶ್ವಾಸಭರಿತ ಹಾವಭಾವಗಳು. ಇವೆಲ್ಲ ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಿದವು.

"ಇಂದು ಪಂಡಿತ ನಾರಾಯಣಶಾಸ್ತ್ರಿಗಳು ನಮ್ಮೊಡನೆ ಇರುವುದು ಅದೃಷ್ಟವೇ ಸರಿ. ಇವರು ನಮ್ಮ ಸಂದೀಪನ ತಾತ. ಅವರು ಸುಪ್ರಸಿದ್ಧ ಶಾಸ್ತ್ರೀಯ ಗಾಯಕರು, ಉದಾರ ದಾನಿಗಳು. ಇಂದು ನಿಮ್ಮನ್ನು ಕುರಿತು ಭಾಷಣ ಮಾಡಲು ಅವರನ್ನು ನಾವು ಆಹ್ವಾನಿಸಿದ್ದೇವೆ. ಈಗ ನೀವು ಏನನ್ನು ತಿಳಿಯಲು ಇಚ್ಛಿಸುವಿರೋ, ಅದನ್ನೆಲ್ಲ ಅವರ ಬಳಿ ಕೇಳಿ ತಿಳಿದುಕೊಳ್ಳಬಹುದು" ಎಂದು ಕುಲಕರ್ಣಿ ಮಾಸ್ತರರು ಘೋಷಿಸಿದರು.



ಚಿತ್ರ : ಶ್ರೀಕಾಂತ ಆಚಾರ್ಯ

"ಮಕ್ಕಳೇ, ನಿಮಗೆಲ್ಲ ಅಭಿನಂದನೆಗಳು! ನಾನು ಐವತ್ತು ವರ್ಷಗಳ ನಂತರ ಮತ್ತೆ ಶಾಲಾತರಗತಿಗೆ ಪ್ರವೇಶ ಮಾಡುತ್ತಿದ್ದೇನೆ. ನಿಮ್ಮ ಜೊತೆ ಇರುವುದಕ್ಕೆ ನನಗೆ ಬಹಳ ಸಂತೋಷವಾಗುತ್ತಿದೆ. ನಾನು ಯಾವುದರ ಬಗ್ಗೆ ಮಾತನಾಡಲಿ?" ಎಂದು ನಾರಾಯಣ ಶಾಸ್ತ್ರಿಗಳು ಕೇಳಿದರು.

ಮಕ್ಕಳೆಲ್ಲ ಕಾತರರಾಗಿದ್ದರೂ ಕೂಡ, ಮೌನವಾಗಿದ್ದುಬಿಟ್ಟರು. ಒಬ್ಬರ ಮುಖ ಇನ್ನೊಬ್ಬರು ನೋಡಲಾರಂಭಿಸಿದರು. ಕಡೆಗೆ ಕುಲಕರ್ಣಿ ಮಾಸ್ತರರೇ ಒಂದು ಪ್ರಶ್ನೆ ಕೇಳಿದರು, "ನಮ್ಮ ಹುಡುಗರಿಗೆ ಆರಂಭದ ತೊಂದರೆ. ಸಾಮಾನ್ಯವಾಗಿ ಅವರು ಪ್ರಶ್ನೆಗಳ ಮಳೆಗರೆಯುತ್ತಾರೆ. ನಾನೇ ಈ ಚರ್ಚೆಯನ್ನು ಆರಂಭಿಸಿಬಿಡುತ್ತೇನೆ. ನೀವು ಹೇಗೆ ಬಹುದೊಡ್ಡ ಸಂಗೀತಕಾರರಾದಿರಿ, ದಯವಿಟ್ಟು ಹೇಳಿ?"

ಇದಕ್ಕೆ ನಾರಾಯಣಶಾಸ್ತ್ರಿಗಳು ಹೀಗೆ ನುಡಿದರು: "ಇವತ್ತು ನಾನೇನಾಗಿದ್ದೇನೆಯೋ, ಅದು ಭಗವಂತನ ಕೃಪೆಯಿಂದಲೇ ಎಂದು ಹೇಳಬೇಕು. ನಾನು ಸಂಗೀತವನ್ನು ಪ್ರತಿನಿತ್ಯ ಹತ್ತು ಗಂಟೆಗಳ ಕಾಲ ಅಭ್ಯಾಸ ಮಾಡುತ್ತಿದ್ದೆ. ಈಗಲೂ ಪ್ರತಿನಿತ್ಯ ಎರಡು ಗಂಟೆಗಳ ಕಾಲ ಸಂಗೀತಾಭ್ಯಾಸ ಮಾಡುತ್ತಿದ್ದೇನೆ. **ಅಭ್ಯಾಸ ನಮ್ಮನ್ನು ಪರಿಪೂರ್ಣರನ್ನಾಗಿ ಮಾಡುತ್ತದೆ.**"

ಕೆಲವು ವಿದ್ಯಾರ್ಥಿಗಳು ಆಶ್ಚರ್ಯದಿಂದ ಬಾಯಿ ತೆರೆದು ಕುಳಿತು ಕೊಂಡಿದ್ದರು. "ಸರ್, ನೀವು ದಿನವೂ ಅಷ್ಟೊಂದು ದೀರ್ಘಕಾಲ, ಬಹಳ ವರ್ಷಗಳ ಕಾಲ ಹೇಗೆ ಅಭ್ಯಾಸ ಮಾಡುತ್ತಿದ್ದಿರಿ? ನನಗಂತೂ ಒಂದು ಗಂಟೆ ಓದುವಷ್ಟರಲ್ಲಿ ಬೋರ್ ಆಗಿಬಿಡುತ್ತದೆ, ಏನೇನೋ ಆಲೋಚನೆಗಳು ಬಂದುಬಿಡುತ್ತವೆ" ಎಂದು ಬೆರಗಿನಿಂದ ನುಡಿದ ಪ್ರಕಾಶ. ಪಂಡಿತ ನಾರಾಯಣಶಾಸ್ತ್ರಿಗಳು ಅವನ ಕಡೆ